ಬಾವಿಯಲ್ಲಿ ಧರಣಿ ಮಾಡುತ್ತಿರುವ ಸದಸ್ಯರೆಲ್ಲರು ದಯವಿಟ್ಟು ತಮ್ಮ ಸ್ಥಾನಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರದ ಬಗ್ಗೆ ಕೂಡ ಚರ್ಚೆ ಮಾಡಿ ಪರಿಹಾರವನ್ನು ಹುಡುಕೋಣವೆಂದು ನಾನು ಬಹಳ ವಿನಮ್ರತೆಯಿಂದ ತಮ್ಮ ಮೂಲಕ ಎಲ್ಲಾ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು ಒಬ್ಬ ಮುತ್ಸದ್ದಿ ರಾಜಕಾರಣಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಿದ್ದು ಸವದಿಯವರೆ, ಮಾನ್ಯ ಶಂಕರಲಿಂಗೇಗೌಡರು ಮಾತನಾಡಿ ಮುಗಿಸಲಿ. ಮಾನ್ಯ ರಾಮದಾಸ್ ಬಗ್ಗೆ ಈ ಕಡೆ ಏನು ಮಾತನಾಡಿದ್ದಾರೆಂಬುದನ್ನು ನಾನು ಆನಂತರ ನೋಡುತ್ತೇನೆ. I will look into the matter.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ(ಉನ್ನತ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಗೋವಿಂದ ಕಾರಜೋಳರವರು ಆ ಸಂದರ್ಭದಲ್ಲಿಯೆ ಎದ್ದು ನಿಂತು ಇದರ ಬಗ್ಗೆ ಅಬ್ಜೆಕ್ಟ್ ಮಾಡಿದರು.

ಅಧ್ಯಕ್ಷರು:– ಒಂದು ನಿಮಿಷ ಎಲ್ಲರು ಸುಮ್ಮನಿರಿ. ಮಾನ್ಯ ಗೋವಿಂದ ಕಾರಜೋಳರವರೆ ತಾವು ಮಾತನಾಡಿ.

ಶ್ರೀ ಗೋವಿಂದ ಕಾರಜೋಳ(ಸಣ್ಣ ನೀರಾವರಿ ಸಚಿವರು):– ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಡುವ ಆರ್ಭಟದಲ್ಲಿ ಕೆಲವು ಮಾತಗಳನ್ನು ಹೇಳಿದರು. ನಾನು ಆ ಸಂದರ್ಭದಲ್ಲಿ ಎದ್ದು ನಿಂತು ಅಬ್ಜಕ್ಷನ್ ಮಾಡಿದೆ. ಆದರೆ, ಈ ಮಾತಿನ ಭರದಲ್ಲಿ ಯಾರು ಕೇಳಿಸಿಕೊಳ್ಳಲಿಲ್ಲವೆಂದು ನನಗೆ ಅನಿಸುತ್ತದೆ. ಆದ್ದರಿಂದ, ಇದನ್ನು ದಯವಿಟ್ಟು ಕಡತದಿಂದ ತೆಗೆದುಹಾಕಿಸಿ ಈ ಪ್ರರಣವನ್ನು ಮುಕ್ತಾಯ ಮಾಡಬೇಕು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು ಮುತ್ಸದ್ದಿ ಮತ್ತು ನಿಗರ್ವಿ ರಾಜಕಾಖಣಿ. ಆ ಜನಾಂಗದ ಪ್ರಬಲ ರಾಜಕಾರಣಿ ಎಂದು ಹೇಳಿದರೆ ತಪ್ಪಾಗಲಾರದು. ನನಗೆ ಅವರ ಬಗ್ಗೆ ಗೌರವ ಇದೆ. ನಾನು ಅಲ್ಲಿಗೆ ಹೋಗಿದ್ದೇನೆಂಬ ಮಾತು ಅವರು ಮಾತನಾಡುವ ಭರದಲ್ಲಿ ಹೇಳಿದ್ದಾರೆ. ನಾನು ಅನ್ಯಾಯ ಮತ್ತು ಅನೀತಿಗಳ ಜೊತೆ ಒಪ್ಪಂದವನ್ನು ಖಂಡಿತ ಮಾಡಿಕೊಳ್ಳುವುದಿಲ್ಲ. ಈಗ ನಡೆದಿರತಕ್ಕಂಥ ಘಟನೆಗಳ ಬಗ್ಗೆ ಜನಸಾಮಾನ್ಯರ ಅಭಿಪ್ರಾಯಗಳನ್ನು ಇಲ್ಲಿ ಹೇಳಿದ್ದೇನೆ ವಿನಾ: ನನ್ನ ವೈಯಕ್ತಿಕವಾದ ಅಭಿಪ್ರಾಯ ಏನು ಇಲ್ಲ. ಆದರೆ, ಮೈಸೂರು ಜನರ ಅಭಿಪ್ರಾಯ ಇರತಕ್ಕಂಥದ್ದು ಏನೆಂದರೆ, ಅಲ್ಲಿ ನಡೆದಿರುವ ಘಟನೆಗೆ ಅಲ್ಲಿಯ ಜನಪ್ರತಿನಿಧಿಗಳೇ ಕಾರಣ ಎಂಬ ಪದವನ್ನು ಹೇಳಿದ್ದೀನಿ. ಅದಕ್ಕೆ ನಾನು ವಿಷಾದವನ್ನು ವ್ಯಕ್ತಪಡಿಸುವುದಿಲ್ಲ. ಇದು ಸತ್ಯ.

ಅನ್ಯಾಯ ಅನೀತಿಗಳ ಜೊತೆ ನಾನು ಎಂದಿಗೂ ಒಪ್ಪಂದ ಮಾಡಿಕೊಳ್ಳುವುದಿಲ್ಲ. ನಾನು ಹೊರಗಡೆ ಹೋಗುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಸದನದಿಂದ ಹೊರಗಡೆ ಹೋದರು)

(ಗೊಂದಲ)

ಡಾ: ಹೆಚ್.ಸಿ.ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ದಾಖಿಲಾತಿಗಳಿವೆ ಮತ್ತು ಅವರು ನೋಟಿಸ್ ಮೂಲಕ ಕೊಟ್ಟಿದ್ದಾರೆ. ...

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್:– He should seek personal apology. This is No.1, No.2, ಇಡೀ ಸದನಕ್ಕೆ ಅವರು ಅಪಾಲಜಿ ಕೇಳಬೇಕು. ಸುಮ್ಮನೆ ಈ ರೀತಿಯಾಗಿ ತೇಲಿಸಿ ಮಾಡತಕ್ಕಂಥದ್ದರ ಬಗ್ಗೆ ನಾವು...

ಶ್ರೀ ಎಸ್.ಸುರೇಶ್ ಕುಮಾರ್:– we can't tolerate.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ತಾವು ನಮ್ಮನ್ನು ಕರೆದು ಮಾತನಾಡಿದ್ದೀರಿ. ಮತ್ತೆ ಸಂಸದೀಯ ಸಚಿವರು ಕೂಡ ನಮ್ಮ ಜೊತೆಗೆ ಬಂದು ಮಾತನಾಡಿದ್ದಾರೆ. ಅವರು ನಮ್ಮ ಜೊತೆ ಮಾತನಾಡಿ ತಾವು ಹೇಳಿರುವ ಸಲಹೆಗಳನ್ನು ಒಪ್ಪಿಕೊಂಡು ನಾವು ಇಲ್ಲಿ ಕುಳಿತುಕೊಂಡಿದ್ದೇವೆ. ಮತ್ತೆ ಅವರೂ ಕೂಡ ಅದನ್ನು ಒಪ್ಪಿಕೊಂಡು ಬಂದಿದ್ದಾರೆ. ಆದರೆ, ಈಗ ಮಾನ್ಯ ಸದಸ್ಯರು ಉದ್ಧಟತನದಿಂದ ಮಾತನಾಡಿದರೆ ಹೇಗೆ? ಬಹುಶ: ಅವರಿಗೆ ಮಿನಿಸ್ಟರ್‌ಗಿರಿ ಸಿಕ್ಕಿಲ್ಲವೆಂಬ ಕೋಪ ಇರಬೇಕೇನೂ ಗೊತ್ತಿಲ್ಲ. ಯಾರೋ ಮೇಲಿನ ಕೋಪವನ್ನು ತೆಗೆದುಕೊಂಡು ಇಲ್ಲಿ ಮಾಡುವುದಕ್ಕೆ ಹೋದರೆ ಅದು ಆಗುವುದಿಲ್ಲ. ಅವರ ವರ್ತನೆ ಈ ರೀತಿಯಾದರೆ ಮತ್ತು ಇವರ ಸದಸ್ಯರುಗಳು ಈ ರೀತಿಯಾಗಿ ನಡೆದುಕೊಳ್ಳುವುದಾದರೆ ಇಲ್ಲಿ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಮತ್ತೆ ನಾವೂ ಕೂಡ ನಮ್ಮ ದಾರಿಯನ್ನು ಹಿಡಿದುಕೊಳ್ಳಬೇಕಾಗುತ್ತದೆ. ಈ ರೀತಿಯಾದರೆ, ನಾವು ಇಲ್ಲಿಗೆ ಏಕೆ ಬರಬೇಕು? ಹಾಗದರೆ, ನಮ್ಮ ನಿಯಮಾವಳಿಗಳೆಲ್ಲವನ್ನು ಗಾಳಿಗೆ ತೂರಿ ಬಿಡೋಣ. ಇಲ್ಲಿದಿದ್ದರೆ ಎಲ್ಲವನ್ನು ಬದಲಾವಣೆ ಮಾಡಿಕೊಳ್ಳೋಣ. ಯಾರು ಏನು ಬೇಕಾದರು ಮಾತನಾಡಬಹುದೆಂದು ನಿಯಮಾವಳಿಗಳನ್ನು ಮಾಡಿಕೊಳ್ಳೋಣ. ಇರತಕ್ಕಂಥ ನಿಯಮಗಳ ಚೌಕಟ್ಟಿನ ಅಡಿಯಲ್ಲಿ ಕೆಲಸ ಆಗಬೇಕು. ಮತ್ತೆ ಅದರಂತೆ ಇಲ್ಲಿ ನಡೆದುಕೊಳ್ಳಬೇಕು. ನೀವು ಏನು ಹೇಳುತ್ತೀರೋ ಅದನ್ನು ಕೇಳುವುದಕ್ಕೆ ನಾವು ತಯಾರಿದ್ದೇವೆ. ಆದ್ದರಿಂದ, ಈ ರೀತಿಯಾದ ಉದ್ಧಟತನ ಮಾಡಬಾರದು.

ಶ್ರೀ ಟಿ.ಬಿ.ಜಯಚಂದ್ರ(ಶಿರಾ): ಮಾನ್ಯ ಅಧ್ಯಕ್ಷರೆ, ಈ ಗೊಂದಲ ನಿರ್ಮಾಣವಾದಾಗ ತಾವು ತಮ್ಮ ಕಛೇರಿಗೆ ಕರೆಸಿ ಮಾನ್ಯ ಸಭಾನಾಯಕರು, ವಿರೋಧ ಪಕ್ಷದ ನಾಯಕರು ಎಲ್ಲರೂ ಕುಳಿತು ಸೌಹಾರ್ಧವಾಗಿ ಈ ರೀತಿಯಾಗಿ